ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 665
ಸದಸ್ಯರ ಹೆಸರು : ಶ್ರೀ ಎನ್.ಅಪ್ಪಾಜಿಗೌಡ
ಉತ್ತರಿಸುವ ದಿನಾಂಕ : 22-07-2019
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ಬೆಳ್ಳೂರು ಹೋಬಳಿ ಕಾಳಿಂಗನಹಳ್ಳಿ ಪಂಚಾಯಿತಿ ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಯುತ್ತಿರುವ ಇಂದಿರಾಗಾಂಧಿ ವಸತಿ ಶಾಲೆ ಕಟ್ಟಡದ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ	ಬಂದಿದ್ದಲ್ಲಿ, ಸದರಿ ಕಾಮಗಾರಿಯನ್ನು ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ; (ಈ ಕಾಮಗಾರಿಯ ಅಂದಾಜು ವೆಚ್ಚದ ಪಟ್ಟಿ, ಅಂತಿಮ ಬಿಲ್ಲು ಮತ್ತು ಪ್ಲಾನ್‌ನೊಂದಿಗೆ ಗುತ್ತಿಗೆದಾರ ಸಂಪೂರ್ಣ ಮಾಹಿತಿ ನೀಡುವುದು)	ಈ ವಸತಿ ಶಾಲೆಯ ಕಟ್ಟಡ ಕಾಮಗಾರಿಯು ಪ್ರಗತಿ ಹಂತದಲ್ಲಿರುತ್ತದೆ. ಈ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿ ಅರ್ಹತೆ ಪಡೆದ ಶ್ರೀ ಮನೋಹರ್ ಯಮಸಂಧಿ ಚಂದ್ರೇಗೌಡ, ನಂ.5423, ಹಳೆಯ ಹೌಸಿಂಗ್ ಬೋರ್ಡ್, ರವೀಂದ್ರ ನಗರ, ಹಾಸನ-573201 ರವರಿಗೆ ಗುತ್ತಿಗೆ ನೀಡಲಾಗಿದೆ. ವಿವರಗಳು ಕೆಳಕಂಡಂತಿವೆ. (1) ಈ ಕಾಮಗಾರಿಯ ಅಂದಾಜು ಮೊತ್ತ ರೂ. 16.95 ಕೋಟಿಗಳು. (2) ಗುತ್ತಿಗೆ ಮೊತ್ತ ರೂ. 17.03 ಕೋಟಿಗಳು. (3) ಈವರೆಗೆ ಪಾವತಿಯಾದ ಮೊತ್ತ ರೂ. 6.73 ಕೋಟಿಗಳು (02 ಆರ್.ಎ. ಬಿಲ್‌ಗಳಲ್ಲಿ ಪಾವತಿಸಲಾಗಿದೆ) (4) ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು ಅಂತಿಮ ಬಿಲ್ಲನ್ನು ಪಾವತಿಸಿರುವುದಿಲ್ಲ. ಕಾಮಗಾರಿಗೆ ಅಂದಾಜು ಪಟ್ಟಿ & ನಿವೇಶನದ ನಕ್ಷೆಯನ್ನು ಅನುಬಂಧ-1 ದಲ್ಲಿ ನೀಡಿದೆ.

ಇ	ಸದರಿ ಕಟ್ಟಡದ ಕಾಮಗಾರಿ ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಕಟ್ಟಡ ಕಾಮಗಾರಿಯ ಗುಣಮಟ್ಟದ ಬಗ್ಗೆ ಗುಣಮಟ್ಟ ಪರಿಶೀಲನಾ ಪ್ರಾಧಿಕಾರದಿಂದ ವರದಿ ಪಡೆಯಲಾಗಿದೆಯೇ; (ವರದಿ ಪ್ರತಿ ಸಲ್ಲಿಸುವುದು)	ಈ ಕಾಮಗಾರಿಯು ತಾಂತ್ರಿಕ ಸಲಹೆಗಾರರಾದ ಮೆ॥ ಅಲ್ಕಾನ್ ಕನ್ಸಲ್ಟಿಂಗ್ ಇಂಜಿನಿಯರ್ಸ್ ಇಂಡಿಯಾ ಪ್ರೈ. ಲಿ., ಬೆಂಗಳೂರು ಇವರ ಉಸ್ತುವಾರಿಯಲ್ಲಿ ನಿರ್ಮಾಣವಾಗುತ್ತಿದೆ. ಕಾಮಗಾರಿ ಕಳಪೆ ಗುಣಮಟ್ಟವಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಗುತ್ತಿಗೆದಾರರು ನಿರ್ವಹಿಸಿದ ಕಾಮಗಾರಿಯ ಗುಣಮಟ್ಟದ ಪರಿವೀಕ್ಷಣೆಗೆ 3ನೇ ವ್ಯಕ್ತಿ ಮೆ॥ ಬ್ಯೂರೋ ವೆರಿಟಾಸ್‌ರವರಿಗೆ ವಹಿಸಲಾಗಿದೆ. ಈ ಸಂಸ್ಥೆಯು ದಿನಾಂಕ: 18.07.2019 ರಂದು ಪರಿವೀಕ್ಷಣೆ ನಡೆಸಿ ವರದಿ ನೀಡಿರುತ್ತಾರೆ. ಈ ವರದಿಯಲ್ಲಿ ಕಾಮಗಾರಿಯ ಕೆಲವು ಭಾಗಗಳಲ್ಲಿ ನ್ಯೂನತೆಗಳನ್ನು ಸರಿಪಡಿಸಲು ಸಲಹೆಗಳನ್ನು ನೀಡಿರುತ್ತಾರೆ, ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಮುಂದುವರೆದು ಕಾಮಗಾರಿಯ ಗುಣಮಟ್ಟವನ್ನು ಮೆ॥ ಬ್ಯೂರೋ ವೆರಿಟಾಸ್‌ರವರು 10 ಹಂತಗಳಲ್ಲಿ ಪರಿವೀಕ್ಷಣೆ ನಡೆಸುವರು ಹಾಗೂ ಅವರ ಸೂಚನೆಯಂತೆ ಕ್ರಮ ಕೈಗೊಳ್ಳಲಾಗುವುದು.
ಈ	ಈ ಕಾಮಗಾರಿಗೆ ಸಂಬಂಧಿಸಿದ ಇಂಜಿನಿಯರ್‌ಗಳು ಮತ್ತು ಗುತ್ತಿಗೆದಾರರ ಮೇಲೆ ಯಾವ ರೀತಿಯ ಕಾನೂನು ಕ್ರಮ ಕೈಗೊಳ್ಳಲಾಗಿದೆ?	ಗುತ್ತಿಗೆದಾರರಿಗೆ ವಹಿಸಿದ ಕಾಮಗಾರಿಯು ಪ್ರಗತಿಯಲ್ಲಿದ್ದು, ಪೂರ್ಣಗೊಂಡಿರುವುದಿಲ್ಲ, ಸದರಿ ಕಾಮಗಾರಿಯ ಗುಣಮಟ್ಟವನ್ನು ಮೆ॥ ಬ್ಯೂರೋ ವೆರಿಟಾಸ್ ಇವರಿಂದ 10 ಹಂತಗಳಲ್ಲಿ ಪರಿವೀಕ್ಷಣೆ ನಡೆಸಿ ಅವರ ಸೂಚನೆಯಂತೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು. ಪ್ರಸ್ತುತ ಸದರಿ ಕಾಮಗಾರಿಯು ಪ್ರಗತಿ ಹಂತದಲ್ಲಿರುವುದರಿಂದ್ಧ, ಕಾನೂನು ಕ್ರಮ ಉದ್ಭವಿಸುವುದಿಲ್ಲ.

ಸಕಇ 99 ಮೊದೇಶಾ 2019

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು